ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನಮ್ಮ ತಿಪಟೂರು ಶಾಸಕರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕೆರೆಗೆ ನೀರು ಕೊಡುತ್ತೇವೆ ಎಂದು ಒಂದು ಮಾತನ್ನು ಹೇಳಿದ್ದರು. ಅದನ್ನು ಸೇರಿಸಿ ಹೇಳಿಬಿಡಿ. ಪಾಪ ಅವರು ಬಂದು ಅಲ್ಲಿ ಒಪ್ಪಿಕೊಂಡಿದ್ದಾರೆ. ಕುಡಿಯುವ ನೀರು ತುಂಬಿಸಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಯಡಿಯೂರಪ್ಪನವರೇ, ಪ್ರಾರಂಭದಲ್ಲಿಯೇ ನಾನು ಹೇಳಿದ್ದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಕೆ.ಇ.ಬಿ. ಅರಿಯರ್ಸ್ ಅನ್ನು ಡೆಫರ್ ಮಾಡಿ ತಿಪಟೂರು ಮತ್ತು ಅರಸೀಕೆರೆಗೆ ಕುಡಿಯುವ ನೀರನ್ನು ತಾವು ಕ್ಲಿಯರ್ ಮಾಡಿಕೊಡಿ ಎಂದು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡು ಅವರು ಇನ್ಸ್ಟ್ರಕ್ಷನ್ ಕೊಡಟ್ಟಿದ್ದಾರೆ.

ಉಪಾಧ್ಯಕ್ಷರು : ಅವರು ಹೇಳಿದ್ದಾರೆ, ಒಪ್ಪಿಕೊಂಡಿದ್ದಾರೆ, ಮತ್ತೆ ಏನು?

ಶ್ರೀ ಕೆ.ಎನ್. ನಾಗೇಗೌಡ : ತಿಪಟೂರು ಮತ್ತು ಕೆ.ಆರ್. ಪೇಟೆ, ನಾಗಮಂಗಲ ಈ ಮೂರು ಸೇರಿಕೊಂಡಿದೆ. ನಾರಾಯಣ್‌ರವರು ಹೇಳಿದ ಪ್ರಶ್ನೆಗೆ ಈಗ ಹೊಸದಾಗಿ ನೀರನ್ನು ಅಲ್ಲಿ ಬಿಟ್ಟಿದ್ದೇವೆ. ಸುಮಾರು 125-130 ಕೆರೆಗಳು ಬರುತ್ತವೆ. ಹೊಸದಾಗಿ 25-30 ವರ್ಷದ ಹಿಂದೆ ಆಸೆ ಪಟ್ಟು ತುಮಕೂರು ಜನ ನೀರು ಹೋಗತಕ್ಕಂಥ ಸಂದರ್ಭದಲ್ಲಿ ಕೆರೆಗಳನ್ನು ತುಂಬಿಸದೇ ಹೋದರೆ ಅಂಡರ್ ಗ್ರೌಂಡ್ ವಾಟರ್ ಸಮಸ್ಯೆಯಾಗುತ್ತದೆ ಎಂದು 4-5 ಟಿಎಂಸಿ ನೀರು ಬೇಕು ಎಂದು ಕೇಳಿದ್ದಾರೆ. ಈ ವರ್ಷದ ಮಟ್ಟಿಗೆ ಕಮಾಂಡ್ ಏರಿಯಾ ಫೈನಲೈಸ್ ಮಾಡುವವರಿಗೆ, ಈ ವರ್ಷದಮಟ್ಟಿಗೆ ಎಲ್ಲಾ ಕೆರೆಗಳಿಗೆ ಸಾಧ್ಯವಾದಮಟ್ಟಿಗೆ ಎಲ್ಲಾ ಕೆರೆಗಳಿಗೆ ತುಂಬಿಸಿಕೊಡುವಂತಹ ಆದೇಶ ನಾನು ಕೊಡುತ್ತೇನೆ.

ಸೊರಬದಲ್ಲಿ ಸಣ್ಣ ನೀರಾವರಿಯ ಉಪವಿಭಾಗ ಕಛೇರಿ

401 - ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಉಪ ವಿಭಾಗದ ಕಛೇರಿಯ ಈ ಮೊದಲು ಕಾರ್ಯನಿರ್ವಹಿಸುತ್ತಿದ್ದು ಸದರಿ ಕಛೇರಿಯನ್ನು ಸ್ಥಳಾಂತರಗೊಳಿಸಲಾಗಿರುವುದು ನಿಜವೇ, ಸದರಿ ಕಛೇರಿಯನ್ನು ಪುನಃ ತೆರೆಯುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಸೊರಬ ತಾಲ್ಲೂಕಿನ ಮೂಗೂರು ಏತ ನೀರಾವರಿ ಯೋಜನೆ, ಮೂಡಿ ಏತ ನೀರಾವರಿ ಯೋಜನೆ ಮತ್ತು ಗುಡವಿ ಏತನೀರಾವರಿ ಯೋಜನೆ ಹಾಗೂ ಕಟ್ಟಿಹಳ್ಳಿ ಏತ ನೀರಾವರಿ ಯೋಜನೆ ಮತ್ತು ಕೆರೆ ಕಾಮಗಾರಿಗಳು ಪ್ರಗತಿಯಲ್ಲಿದ್ದರೂ ಸದರಿ ಕಛೇರಿಯನ್ನು ಇದುವರೆವಿಗೂ ತೆರೆಯದಿರಲು ಕಾರಣವೇನು? ಈ ಕಛೇರಿಯನ್ನು ಯಾವಾಗ ತೆರೆಯಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಹಿಂದೆ ಸೊರಬದಲ್ಲಿ ಒಂದು ವಿಶೇಷ ಸಣ್ಣ ನೀರಾವರಿ ಉಪ ವಿಭಾಗ ಇದ್ದಿತು ಸರ್ಕಾರದ ಆದೇಶ ದಿನಾಂಕ : 31-3-84 ರಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆ ಬೇರೆ ಬೇರೆಯಾದ ಮೇಲೆ ಸೊರಬದಲ್ಲಿದ್ದ ವಿಶೇಷ ಸಣ್ಣ ನೀರಾವರಿ ಉಪ ವಿಭಾಗದ ಬದಲು ಶಿಕಾರಿಪುರದಲ್ಲಿ ಸಣ್ಣ ನೀರಾವರಿ ಉಪ ವಿಭಾಗವನ್ನು ತೆರೆಯಲಾಯಿತು. ಸೊರಬದಲ್ಲಿ ಸಣ್ಣ ನೀರಾವರಿ ಉಪ ವಿಭಾಗವನ್ನು ತೆರೆಯುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಸರ್ಕಾರ ಆದೇಶ ಸಂಖ್ಯೆ : ನೀಇ 56 ಸನೀರಾ 95 ದಿನಾಂಕ : 19-5-97 ರಲ್ಲಿ ಶಿಕಾರಿಪುರದಲ್ಲಿ ಸಣ್ಣ ನೀರಾವರಿ ಉಪ ವಿಭಾಗ ತೆರೆದಿದ್ದು, ಇದರ ಕಾರ್ಯಕ್ಷೇತ್ರ ತಾಲ್ಲೂಕುಗಳು ಶಿಕಾರಿಪುರ, ಸೊರಬ, ಸಾಗರ ಎಂದೇ ನಿಗದಿಪಡಿಸಲಾಗಿದೆ. ಈ ಉಪ ವಿಭಾಗವು ಸೊರಬ ತಾಲ್ಲೂಕಿನ ಕಾಮಗಾರಿಗಳನ್ನು ನೋಡಿಕೊಳ್ಳಲಾಗುತ್ತಿದೆ. ಸೊರಬದಲ್ಲಿ ಉಪ ವಿಭಾಗ ತೆರೆಯುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷರೇ, ಉತ್ತರದಲ್ಲಿ ಸೊರಬ ತಾಲ್ಲೂಕಿನ ಸಣ್ಣ ನೀರಾವರಿ ಉಪ ಕಛೇರಿಯನ್ನು ಶಿಕಾರಿಪುರ ತಾಲ್ಲೂಕಿಗೆ ವರ್ಗಾಯಿಸಲಾಗಿದೆ ಎಂದು ಹೇಳಿದ್ದಾರೆ. ಯಾವ ಆಧಾರದ ಮೇಲೆ ಇದನ್ನು ವರ್ಗಾಯಿಸಲಾಗಿದೆ. ಏಕೆಂದರೆ, ಏಕೆ ಈ ಪ್ರಶ್ನೆ ಕೇಳಿದೆ ಎಂದರೆ ಮುಖ್ಯವಾಗಿ ಇದು ಸೊರಬ ತಾಲ್ಲೂಕಿನಲ್ಲಿ 22-23 ಕೋಟಿ ರೂಪಾಯಿಯ ಏತನೀರಾವರಿ ಯೋಜನೆಗಳು ಈಗ ನಡೆಯುತ್ತಿವೆ. ಅದಕ್ಕೂ ಕೂಡ ಹೋದಸಾರಿ ಸದನದಲ್ಲಿ ನಾವು ಅದರ ಬಗ್ಗೆ ಪ್ರಶ್ನೆ ಹಾಕಿದಾಗ ಮೂರನೇ ಒಂದು ಭಾಗವನ್ನು ಫಂಡ್ ರಿಲೀಸ್ ಮಾಡುತ್ತೇವೆಂದುಕೂಡ ಹೇಳಿದ್ದರು. ಇದುವರೆಗೂ ಕೂಡ ಯಾವುದೇ ಫಂಡ್ ರಿಲೀಸ್ ಆಗಿಲ್ಲ. ಮತ್ತು ಈಗ ಎರಡು ಪ್ರಶ್ನೆಗಳು ಕೂಡ ಪರಿಶೀಲನೆಯಲ್ಲಿದೆ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಇವತ್ತು ಶಿಕಾರಿಪುರ ತಾಲ್ಲೂಕಿನಿಂದ ಆ ಕಛೇರಿಯನ್ನು ಅಲ್ಲೇ ಇಡುತ್ತೀರಾ ಅಥವಾ ಇಲ್ಲಿ ಒಂದು ಹೊಸ ಕಛೇರಿಯನ್ನು ಮಾಡುತ್ತೀರೋ ಅಥವಾ ಅಲ್ಲಿಂದ ಇದನ್ನು ಶಿಫ್ಟ್ ಮಾಡುತ್ತೀರಾ ಎಂದು ಉತ್ತರ ಕೊಡಬೇಕು.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಪಿಡಬ್ಲ್ಯೂಡಿ ಮತ್ತು ಸಣ್ಣ ನೀರಾವರಿ ಇಲಾಖೆ ಏನು ಜಾಯಿಂಟ್ ಆಗಿ ಕೆಲಸ ಮಾಡುತ್ತಿತ್ತು. ಇದನ್ನು 1984ರಲ್ಲಿ ಶಿಕಾರಿಪುರಕ್ಕೆ ಚೇಂಜ್ ಮಾಡಿದ್ದಾರೆ. ಕಾರಣದಿಂದ ನನಗೆ ಕೊಟ್ಟಿರತಕ್ಕಂಥ ಈ 35 ಸಬ್‌ಡಿವಿಜನ್‌ಗಳನ್ನು ನಮ್ಮ ರಾಜ್ಯದಲ್ಲಿ ಹಂಚಿರುವುದರಿಂದ, ನಾನು ಎಲ್ಲಾ ಸದಸ್ಯರುಗಳ ಬಯಕೆಯನ್ನು ಈಡೇರಿಸುವುದಕ್ಕೆ ಸಾಧ್ಯವಿಲ್ಲ. ಈ 35 ಈಗಿರುವ ಸಬ್ ಡಿವಿಜನ್‌ಗಳನ್ನು ನಾವು ಹಂಚಿದ್ದೇವೆ. ಮತ್ತೇ ಏನಾದರೂ ಬಂದರೆ, ಎಂದಂತಹ ಮಾನ್ಯ ಸದಸ್ಯರ ಈಡೇರಿಕೆಯನ್ನು ಅರ್ಥ ಮಾಡಿಕೊಂಡು ಮಾಡಬೇಕೇ ವಿನಃ ಸಧ್ಯಕ್ಕೆ ಇದು ಸ್ವಲ್ಪ ಕಷ್ಟಕರವಾದಂತಹ ಕೆಲಸ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷರೇ, ಇದು ಶಿಫ್ಟ್ ಮಾಡಬೇಕು ಎನ್ನುವಂತಹ ವಿಚಾರ ಅಲ್ಲ. ಇದು 2-3 ತಿಂಗಳ ಹಿಂದಿನಿಂದ ಶಿಫ್ಟ್ ಮಾಡಬೇಕು ಎನ್ನುವಂತಹ

ವಿಚಾರ. ಹಾಗಾಗಿ ಅಲ್ಲಿ ಮುಖ್ಯವಾಗಿ ಏನೆಂದರೆ ಬೇರೆ ಕಡೆಯಿಂದ ಇಂತಹ ಏತನೀರಾವ
ಯೋಜನೆಯ ಒಂದು ದೊಡ್ಡ ಪ್ರಗತಿ ಸೊರಬ ತಾಲ್ಲೂಕಿನಲ್ಲಿ ಈಗ ನಡೆಯುತ್ತಿದೆ. ಅದನ್ನು ಕೂ
ತಾವು ಏನು ಮೂರನೆ ಒಂದು ಭಾಗ ಬಿಡುಗಡೆ ಮಾಡುತ್ತೇವೆ ಎಂದು ಏನು ಮಾಡಿದ್ದೀರಿ, ಅದ
ಪ್ರಕಾರ, ಏಕೆಂದರೆ ಸಣ್ಣಪುಟ್ಟ ಕ್ಲಾರಿಫಿಕೇಷನ್‌ಗೂ ಕೂಡ ಶಿಕಾರಿಪುರಕ್ಕೆ ಮತ್ತೊಂದು ತಾಲ್ಲೂಕಿ
ಹೋಗಬೇಕೆಂದರೆ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಈ ಮಾತು ಹೇಳುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ, ಅಲ್ಲಿ ಏನು ಕಾಮಗಾರಿ ನಡೆಯುತ್ತ
ಅವುಗಳಿಗೆ ತೊಂದರೆ ಆಗದೆ ಇರುವ ರೀತಿಯಲ್ಲಿ ಒಬ್ಬರು ಅಸಿಸ್ಟೆಂಟ್ ಇಂಜೀನಿಯರ್‌ನ್ನು ಆ
ಇಟ್ಟು ಅವರು ಶಿಕಾರಿಪುರಕ್ಕೆ ಹೋಗದ ಹಾಗೆ ಅಲ್ಲಿ ಸೊರಬದಲ್ಲೆ ಕೆಲಸಗಳನ್ನು ನಿರ್ವಹಣ
ಮಾಡುವಂತಹ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಕೆಲಸ ಯಾವರೀತಿಯಲ್ಲಿಯೂ
ಕೂಡ ಕುಂಠಿತವಾಗದೆ ಇರುವಂತಹ ರೀತಿಯಲ್ಲಿ ಪರಿಪೂರ್ಣ ಮಾಡಿಕೊಡುತ್ತೇನೆ ಎನ್ನುವಂತ
ಆಶ್ವಾಸನೆಯನ್ನು ಕೊಡುತ್ತೇನೆ.

ಆಳಂದ ಪಟ್ಟಣದಲ್ಲಿ ಉಪ ಕಾರಾಗೃಹ

402 - ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದ
ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ
ಉತ್ತರಿಸುವರೆ?

*ಅ) ಆಳಂದ ಪಟ್ಟಣದಲ್ಲಿ ಉಪ ಕಾರಾಗೃಹ ನಿರ್ಮಾಣ ಪ್ರಾರಂಭಗೊಂಡು ಸುಮಾರು
6 ವರ್ಷಗಳಾಗಿದ್ದರು ಅದು ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) ಈ ನಿರ್ಮಾಣ ಕಾರ್ಯವು ಯಾವ ಹಂತದಲ್ಲಿದೆ ?

ಇ) ಅದಷ್ಟು ಜಾಗ್ರತೆ ನಿರ್ಮಾಣಕಾರ್ಯ ಪೂರ್ಣಗೊಳಿಸಲು ಕೈಗೊಂಡ ಕ್ರಮವೇನು

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹರಕ್ಷಕ ದಳ ನಾಗರೀಕ ರಕ್ಷಣಾ ಮತ್ತು ಸೈನಿಕ ಕಲ್ಯಾ
ರಾಜ್ಯ ಸಚಿವರು) :

ಅ) ಹೌದು

ಆ) ಮೊದಲ ಹಂತದಲ್ಲಿ ಬಂದಿಗಳ ಕಟ್ಟಡದ ಕಾಮಗಾರಿಯ
ಪೂರ್ಣಗೊಂಡಿರುತ್ತದೆ.

ಇ) ಎರಡನೇ ಹಂತದ ಕಾಮಗಾರಿಯ ಅಂದಾಜು ಮತ್ತು ನಕ್ಷೆಯನ್ನು ತಯಾರಿಸ
ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದ್ದು, ಈ ಸಂಬಂಧವಾಗಿ ಅನುದಾನಬಿಡುಗಡೆಗೆ ಕ್ರ
ಕೈಗೊಳ್ಳಲಾಗಿದೆ.